ಮೂರನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ,
ದಕ್ಷಿಣ ಕನ್ನಡ, ಮಂಗಳೂರು.

## ಸ್ಪೆಷಲ್ ಕೇಸ್ ನಂಬ್ರ 124/2020

| | | | |
|---|---|---|---|
| ಸಾಕ್ಷಿದಾರರ ಹೆಸರು | : | ಸತ್ಯಚಂದ್ರನ್ | ಪ್ರಾಸಾಃ 8 |
| ತಂದೆಯ ಹೆಸರು | : | ಅಪ್ಪು ನಾಯರ್ | ಚಾಸಾಃ 13 |
| ಪ್ರಾಯ | : | 59 ವರ್ಷ | **ದಿನಾಂಕಃ 02.02.2023** ರಂದು ಸಾಕ್ಷಿದಾರರಿಗೆ ಪ್ರಮಾಣವಚನ ಬೋಧಿಸಲಾಯಿತು. |
| ಉದ್ಯೋಗ | : | ಮುಖ್ಯ ಪ್ರಬಂಧಕರು | |
| ವಾಸಸ್ಥಳ | : | ಕ್ಯಾಲಿಕಟ್, ಕೇರಳ. | |

ಮುಖ್ಯ ವಿಚಾರಣೆಃ ವಿಶೇಷ ಸರಕಾರಿ ಅಭಿಯೋಜಕರಿಂದಃ

ನಾನು ಏಪ್ರಿಲ್ 2014 ರಿಂದ ಏಪ್ರಿಲ್ 2017 ರ ವರೆಗೆ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಬೆಳ್ತಂಗಡಿ ಶಾಖೆಯಲ್ಲಿ ಮುಖ್ಯ ಪ್ರಬಂಧಕನಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

2. ಮಂಗಳೂರು ಎ.ಸಿ.ಬಿ. ಪೊಲೀಸರು ನನಗೆ ಪತ್ರವನ್ನು ಬರೆದು 1) ಗೋವಿಂದ್ ನಾಯ್ಕ, 2) ಲೀಲಾವತಿ, 3) ಚೈತ್ರಾ, 4) ಜ್ಞಾನೇಶ್ ಇವರ ಬ್ಯಾಂಕಿನ ವಿವರಗಳನ್ನು ಕೇಳಿದ್ದರು. ನಾನು Core Banking System ದಲ್ಲಿ ಇದ್ದ ದಾಖಲೆಗಳನ್ನು ಪರಿಶೀಲನೆ ಮಾಡಿದ್ದೇನೆ. ಅದರಲ್ಲಿ ನನಗೆ ದಾಖಲೆಗಳು ದೊರೆತಿವೆ.

3. ಪಿ.ಗೋವಿಂದ್ ನಾಯ್ಕ್ ಈತನು ನಮ್ಮ ಬ್ಯಾಂಕಿನಲ್ಲಿ ಉಳಿತಾಯ ಖಾತೆಯನ್ನು ಹೊಂದಿದ್ದಳು. ದಿನಾಂಕ 30.12.2016 ರಂದು ಆ ಖಾತೆಯಲ್ಲಿ ರೂ.1,17,525/- ಜಮಾ ಇತ್ತು. ಅದರ ತಖ್ತೆಯನ್ನು ನಾನು ಆನ್ ಲೈನ್ ಮೂಲಕ Core

Banking System ದಲ್ಲಿ ಪಡೆದು ಪೊಲೀಸರಿಗೆ ಪೂರೈಸಿದ್ದೇನೆ. ಸಾಕ್ಷಿ ಗುರುತಿಸಿದ ಆ ತಖ್ತೆಯನ್ನು ನಿಶಾನೆ ಪಿ-63 ಎಂದು ಗುರುತಿಸಲಾಯಿತು.

4. ಶ್ರೀಮತಿ ಲೀಲಾವತಿ ಹೆಚ್.ಬಿ. ಇವಳು ನಮ್ಮ ಬ್ಯಾಂಕಿನಲ್ಲಿ ಉಳಿತಾಯ ಖಾತೆಯನ್ನು ಹೊಂದಿದ್ದನು. ದಿನಾಂಕ 25.12.2016 ರಂದು ಆ ಖಾತೆಯಲ್ಲಿ ರೂ.38,667/- ಜಮಾ ಇತ್ತು. ಅದರ ತಖ್ತೆಯನ್ನು ನಾನು ಆನ್‌ಲೈನ್ ಮೂಲಕ Core Banking System ದಲ್ಲಿ ಪಡೆದು ಪೊಲೀಸರಿಗೆ ಪೂರೈಸಿದ್ದೇನೆ. ಸಾಕ್ಷಿ ಗುರುತಿಸಿದ ಆ ತಖ್ತೆಯನ್ನು ನಿಶಾನೆ ಪಿ-64 ಎಂದು ಗುರುತಿಸಲಾಯಿತು.

5. ಚೈತ್ರಾ ಇವಳು ನಮ್ಮ ಬ್ಯಾಂಕಿನಲ್ಲಿ ಉಳಿತಾಯ ಖಾತೆಯನ್ನು ಹೊಂದಿದ್ದಳು. ದಿನಾಂಕ 25.12.2016 ರಂದು ಆ ಖಾತೆಯಲ್ಲಿ ರೂ.37,250/- ಜಮಾ ಇತ್ತು. ಅದರ ತಖ್ತೆಯನ್ನು ನಾನು ಆನ್‌ಲೈನ್ ಮೂಲಕ Core Banking System ದಲ್ಲಿ ಪಡೆದು ಪೊಲೀಸರಿಗೆ ಪೂರೈಸಿದ್ದೇನೆ. ಸಾಕ್ಷಿ ಗುರುತಿಸಿದ ಆ ತಖ್ತೆಯನ್ನು ನಿಶಾನೆ ಪಿ-65 ಎಂದು ಗುರುತಿಸಲಾಯಿತು.

6. ಜ್ಞಾನೇಶ್ ಈತನು ನಮ್ಮ ಬ್ಯಾಂಕಿನಲ್ಲಿ ಉಳಿತಾಯ ಖಾತೆಯನ್ನು ಹೊಂದಿದ್ದನು. ದಿನಾಂಕ 25.12.2016 ರಂದು ಆ ಖಾತೆಯಲ್ಲಿ ರೂ.42,220/- ಜಮಾ ಇತ್ತು. ಅದರ ತಖ್ತೆಯನ್ನು ನಾನು ಆನ್‌ಲೈನ್ ಮೂಲಕ Core Banking System ದಲ್ಲಿ ಪಡೆದು ಪೊಲೀಸರಿಗೆ ಪೂರೈಸಿದ್ದೇನೆ. ಸಾಕ್ಷಿ ಗುರುತಿಸಿದ ಆ ತಖ್ತೆಯನ್ನು ನಿಶಾನೆ ಪಿ-66 ಎಂದು ಗುರುತಿಸಲಾಯಿತು.

7. ಶ್ರೀಮತಿ ಲೀಲಾವತಿ ಹೆಚ್.ಬಿ. ಇವಳು ನಮ್ಮ ಬ್ಯಾಂಕಿನಲ್ಲಿ ಮನೆ ಸಾಲದ ಖಾತೆಯನ್ನು ಹೊಂದಿದ್ದಳು. ಅವಳಿಗೆ ನಮ್ಮ ಬ್ಯಾಂಕಿನಿಂದ ರೂ.5,60,000/- ಸಾಲವನ್ನು ಮಂಜೂರು ಮಾಡಿ ಅಷ್ಟು ಹಣವನ್ನು ಅವಳಿಗೆ 2006 ರಲ್ಲಿ ನೀಡಲಾಗಿತ್ತು. ಆ ಸಾಲ ಮತ್ತು ಬಡ್ಡಿಯನ್ನು ಅವಳು ಪಾವತಿ ಮಾಡಿದ್ದಾಳೆ. ಸಾಲದ ಮೊತ್ತ ರೂ.5,60,000/- ಮತ್ತು ಬಡ್ಡಿ ರೂಪದಲ್ಲಿ ರೂ.2,40,199/- ಸಾಲಗಾರಳು ನಮ್ಮ ಬ್ಯಾಂಕಿನಲ್ಲಿ ಪಾವತಿ ಮಾಡಿರುತ್ತಾಳೆ. ಆ ಖಾತೆ ದಿನಾಂಕ 15.04.2013 ರಂದು ಮುಕ್ತಾಯಗೊಂಡಿದೆ. ಸಾಕ್ಷಿ ಆ ಖಾತೆಯ ತಖ್ತೆಯನ್ನು ಗುರುತಿಸಿದ್ದು, ಅದನ್ನು ನಿಶಾನೆ ಪಿ-67 ಎಂದು ಗುರುತಿಸಲಾಯಿತು.

8. ಲೀಲಾವತಿ ಇವಳಿಗೆ ಹೆಚ್ಚುವರಿಯಾಗಿ ರೂ.1,60,000/- ಮನೆ ಸಾಲವನ್ನು ದಿನಾಂಕ 18.03.2009 ರಂದು ಮಂಜೂರು ಮಾಡಿ ಬಿಡುಗಡೆ ಮಾಡಿದ್ದೆವು. ಅದನ್ನು ಸಾಲಗಾರಳು ಬಡ್ಡಿಯೊಂದಿಗೆ ಮರುಪಾವತಿ ಮಾಡಿ ಖಾತೆಯನ್ನು ಮುಕ್ತಾಯಗೊಳಿಸಿದ್ದಾಳೆ. ಅವಳು ಅಸಲು ರೂ.1,60,000/- ಹಾಗೂ ಬಡ್ಡಿ ರೂಪದಲ್ಲಿ ರೂ.28,609/- ಹಣವನ್ನು ಬ್ಯಾಂಕಿನಲ್ಲಿ ಪಾವತಿ ಮಾಡಿದ್ದಾಳೆ. ಸಾಕ್ಷಿ ಆ ಖಾತೆಯ ತಖ್ತೆಯನ್ನು ಗುರುತಿಸಿದ್ದು, ಅದನ್ನು ನಿಶಾನೆ ಪಿ-68 ಎಂದು ಗುರುತಿಸಲಾಯಿತು.

9. ನಮ್ಮ ಬ್ಯಾಂಕಿನಲ್ಲಿ ಲೀಲಾವತಿ ಹೆಚ್.ಬಿ. ಇವಳು ಪರ್ಸನಲ್ ಅಕೌಂಟ್ ಹೊಂದಿದ್ದಳು. ಅದರಿಂದ ಅವಳಿಗೆ ರೂ.1,00,000/- ಸಾಲವನ್ನು ಜನವರಿ 2006 ರಲ್ಲಿ ಮಂಜೂರು ಮಾಡಲಾಗಿತ್ತು. ಆ ಹಣವನ್ನು ಅವಳು ರೂ.11,415/- ಬಡ್ಡಿಯೊಂದಿಗೆ ಮರುಪಾವತಿ ಮಾಡಿದ್ದಾಳೆ. ಸಾಕ್ಷಿ ಆ ಖಾತೆಯ ತಖ್ತೆಯನ್ನು ಗುರುತಿಸಿದ್ದು, ಅದನ್ನು ನಿಶಾನೆ ಪಿ-69 ಎಂದು ಗುರುತಿಸಲಾಯಿತು.

10. ನಮ್ಮ ಬ್ಯಾಂಕಿನಲ್ಲಿ ಲೀಲಾವತಿ ಹೆಚ್.ಬಿ. ಇವಳು ಪರ್ಸನಲ್ ಅಕೌಂಟ್ ಹೊಂದಿದ್ದಳು. ಅದರಿಂದ ಅವಳಿಗೆ ರೂ.3,00,000/- ಸಾಲವನ್ನು ಅಕ್ಟೋಬರ್ 2013 ರಲ್ಲಿ ಮಂಜೂರು ಮಾಡಲಾಗಿತ್ತು. ಆ ಹಣವನ್ನು ಅವಳು ರೂ.14,147/- ಬಡ್ಡಿಯೊಂದಿಗೆ ಮರುಪಾವತಿ ಮಾಡಿದ್ದಾಳೆ. ಸಾಕ್ಷಿ ಆ ಖಾತೆಯ ತಖ್ತೆಯನ್ನು ಗುರುತಿಸಿದ್ದು, ಅದನ್ನು ನಿಶಾನೆ ಪಿ-70 ಎಂದು ಗುರುತಿಸಲಾಯಿತು. ನಾನು ಮೇಲೆ ಹೇಳಿದ ಎಲ್ಲಾ ತಖ್ತೆಗಳೊಂದಿಗೆ ಬ್ಯಾಂಕರ್ಸ್ ಅಧಿನಿಯಮದ ಪ್ರಕಾರ ಪ್ರಮಾಣಪತ್ರ ಗಳನ್ನು ನೀಡಿರುತ್ತೇನೆ

<u>ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ</u>

(ಆರೋಪಿ ಪರ ವಕೀಲರು ತಮ್ಮ ಪರ ಪಾಟೀ ಸವಾಲು ಇಲ್ಲ ಎಂದು ಹೇಳಿರುತ್ತಾರೆ.)

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ.

ಮೂರನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ದ.ಕ., ಮಂಗಳೂರು.